ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಗುರುವಾರ, ದಿನಾಂಕ : 10 ನೇ ಡಿಸೆಂಬರ್, 2020

ಕರ್ನಾಟಕ ಲೋಕ ಸೇವಾ ಆಯೋಗವು ನಡೆಸುವ 2014ನೇ ಸಾಲಿನ ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ಆಯ್ಕೆ ಬಗ್ಗೆ

ಶ್ರೀ ಯು. ಬಿ. ವೆಂಕಟೇಶ್(ನಾಮನಿರ್ದೇಶನ ಹೊಂದಿದವರು) -

380 (236) ಮಾನ್ಯ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ -

(ಅ) ಕರ್ನಾಟಕ ಲೋಕಸೇವಾ ಆಯೋಗವು 2014ನೇ ಸಾಲಿನ ಗೆಜೆಟೆಡ್ ಪ್ರೋಬೇಷನರಿ ಹುದ್ದೆಗಳ ಆಯ್ಕೆಯ ಪ್ರಕ್ರಿಯೆಯಲ್ಲಿ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸಿದ ನಂತರ ಆಯ್ಕೆಯಾದ ಮತ್ತು ಆಯ್ಕೆಯಾಗದ ಎಲ್ಲಾ ಅಭ್ಯರ್ಥಿಗಳ ಮುಖ್ಯ ಪರೀಕ್ಷೆಯ ವಿಷಯವಾರು ಅಂಕಗಳನ್ನು ಒಂದು ವಾರದೊಳಗಾಗಿ ಕೆ. ಪಿ. ಎಸ್. ಸಿ. ಯು ಅಭ್ಯರ್ಥಿಗಳ ಇ-ಮೇಲ್ ಐಡಿಗಳಿಗೆ ಪಾಸ್‌ವಾರ್ಡ್ ಪ್ರೋಟೆಕ್ಷನ್‌ನೊಂದಿಗೆ ನೀಡಿರುವುದು ನಿಜವೇ;

(ಆ) ಹಾಗಿದ್ದಲ್ಲಿ, 2015ನೇ ಸಾಲಿನ ಗೆಜೆಟೆಡ್ ಪ್ರೋಬೇಷನರಿ ಪರೀಕ್ಷೆಗೆ ಸಂಬಂಧಿಸಿದಂತೆ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸಿದ ಒಂದು ವಾರದ ನಂತರ ಕೇವಲ ಸಂದರ್ಶನಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾತ್ರ ವಿಷಯವಾರು ಅಂಕಗಳನ್ನು ನೀಡದೇ, ಅವರು ಗಳಿಸಿದ ಒಟ್ಟು ಅಂಕಗಳನ್ನು ಮಾತ್ರ ನೀಡಲು ಕಾರಣಗಳೇನು;

(ಇ) ವಿಷಯವಾರು ಅಂಕಗಳನ್ನು 67 ದಿನಗಳ ಸಮಯದ ನಂತರ ಅಭ್ಯರ್ಥಿಗಳಿಗೆ ಯಾವುದೇ ಪಾಸ್‌ವಾರ್ಡ್ ಪ್ರೊಟೆಕ್ಷನ್ ಇಲ್ಲದೆ ಇ-ಮೇಲ್ ಮೂಲಕ ನೀಡಲಾಗಿದೆಯೇ;

(ಈ) ವಿಷಯವಾರು ಅಂಕಗಳನ್ನು ನೀಡಲು ಇಷ್ಟು ಸುದೀರ್ಘ ಸಮಯ ತೆಗೆದುಕೊಳ್ಳಲು ಕಾರಣಗಳೇನು?